# ವಾಕ್ WAR

# ವಾದಕ್ಕಿಳಿಯುವ ಮುನ್ನ ಒಮ್ಮೆ ಓದಿ!

ಮಾತು ಆತ್ಮವಂಚನೆಯ ಹಂತವನ್ನು ದಾಟಿ ಸಮೂಹವಂಚನೆಯ ಆಯುಧವಾಗಿ ಬದಲಾಗಿರುವ ಕಾಲಘಟ್ಟ ಇದು. ಮಾತಿನಿಂದ ಕಟ್ಟುವ ವಾದ ಮಾರುಕಟ್ಟೆಯ ಬಹುಬೇಡಿಕೆಯ ಮಾದಕ ಸರಕಾಗಿದೆ. ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಬೇಡಿಕೆ ಕಳೆದುಕೊಳ್ಳದಿರುವ ಸರಕು ‘ಡಿಬೇಟ್‘. ಟೀವಿ ವಾಹಿನಿಗಳಲ್ಲಿ, ರಾಜಕೀಯ ಮುಖಂಡರ ಹೇಳಿಕೆಗಳಲ್ಲಿ, ಸೋಷಿಯಲ್ ಮಿಡಿಯಾಗಳಲ್ಲಿ, ವೆಬ್‌ಸೈಟು, ವಾಟ್ಸ್ ಆ್ಯಪ್ ಗ್ರೂಪುಗಳಲ್ಲಿ – ಎಲ್ಲಿನೋಡಿದರಲ್ಲಿ ಡಿಬೇಟ್‌ಗಳು! ಕೊರೊನಾ ವೈರಾಣುವಿನಿಂದ ತಪ್ಪಿಸಿಕೊಳ್ಳಬಹುದು; ಆದರೆ ಡಿಬೇಟ್‌ಗಳಿಂದಲ್ಲ. ಅವು ನಮ್ಮನ್ನು ಸೆಳೆಯುತ್ತದೆ; ಮಾತಿಗೆಳೆಯುತ್ತದೆ. ಪರವೋ ವಿರೋಧವೋ ಬಣ್ಣ ಬಳಿದು ಅಂಕಕ್ಕೆ ತಳ್ಳುತ್ತವೆ. ಆದಾದ ಮೇಲೆ ನಾವು ಕಾಲಿಗೆ ಹರಿತ ಕತ್ತಿಯನ್ನು ಕಟ್ಟಿಕೊಂಡ ಹುಂಜವೇ! ಎದುರಾಳಿಯನ್ನು ಮಾತಿನಿಂದ ಹಳಿಯಬೇಕು. ಇಲ್ಲವೇ ಅವರ ಕತ್ತಿಯ ಇರಿತಕ್ಕೆ ಮೈಕೊಟ್ಟು ನೆಲಕ್ಕುರುಳಬೇಕು. ಭಾರತೀಯ ಪರಂಪರೆಯ ಬೆಳೆಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದ ಸಂವಾದ ಸಂಸ್ಕೃತಿ, ಎದುರಾಳಿಯನ್ನು ಮುಗಿಸುವ ಅಸ್ತ್ರವಾಗಿದ್ದು ಯಾವಾಗಿಂದ? ನಮ್ಮ ಸುತ್ತಲೂ ಹೆಣೆದುಕೊಂಡಿರುವ ಈ ಪಂಜಿನ ಪಂಜರದಿಂದ ತಪ್ಪಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸಹೊರಟರೆ ಅದು ಇನ್ನೊಂದೇ ವಿಕೃತವಾದಕ್ಕೆ ಹೇತುವಾದೀತು. ಅದರ ಬದಲಿಗೆ ‘ವಾದ’ದ ಪರಿಕಲ್ಪನೆಯನ್ನು ಸಾವಧಾನದಿಂದ ಅರ್ಥಮಾಡಿಕೊಳ್ಳಲು ಮುಂದಾದರೆ, ಅದರ ಅಪಾಯಗಳಿಂದ ತಪ್ಪಿಸಿಕೊಳ್ಳುವ ಅರಿವೂ ಮೂಡೀತು. ಹೊಸ ವಾದಕ್ಕಿಳಿಯುವ ಮುನ್ನ, ಈ ಸಂವಾದದ ಮಾರ್ಗದಲ್ಲೊಮ್ಮೆ ಓದಿನೋಡಿ.

ಡಾ. ಪ್ರೇಮಲತ ಬಿ.